ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಯೋಜನೆಯನ್ನು ರೂಪಾಂತರ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದಾರೆ, ಎಲ್ಲರೂ ಕುಳಿತು ಆಲೋಚನೆ ಮಾಡಬೇಕು ಎಂದು ಅವರು ಹೇಳಿದರೆಂದು ಮಾನ್ಯ ಸಚಿವರು ಹೇಳಿದರು. ಆದಕ್ಕೆ ನಾನು ಅಡ್ಡಿ ಬರುತ್ತಾ ಇಲ್ಲ. ತಾವು ಈ ಯೋಜನೆ ಮಾಡತಕ್ಕ ಕಾಲದಲ್ಲಿ, ಎಷ್ಟು ಪದವೀಧರರು ಈ ಯೋಜನೆ ಕೆಳಗೆ ಬರಬಹುದು, ಎಷ್ಟು ಹಣ ಬೇಕಾಗ ಬಹುದು ಎಂದು ಯೋಚನೆ ಮಾಡವೆ ಜಾರಿಗೆ ತಂದಿರಾ ? ಹಾಗಿದ್ದರೆ ಅಷ್ಟು ಆಗತ್ಯವಾದ ಹಣವನ್ನು ಒದಗಿಸಿ ಯಾರ್ಯಾರು ಪದವೀಧರರು ಇದ್ದಾರೆ ಅವರೆಲ್ಲರಿಗೂ ಇದನ್ನು ಒದಗಿಸುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ. - ೧೯೭೮ ರಲ್ಲಿ ಈ ಸ್ಕೀಮನ್ನು ಹಾಕಿಕೊಂಡಾಗ ಈ ಬಗ್ಗೆ ಯೋಚನೆ ಮಾಡಬೇಕಾಗಿತ್ತು, ಆಗ ಆವರು ಯೋಚನೆ ಮಾಡಲಿಲ್ಲ. ಆದರೆ ಈಗ ನಾವು ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ತಾವು ಸಲಹೆ ಕೊಟ್ಟಿದ್ದೀರಿ. ಒಂದು ಸಮಿತಿ ಮೂಲಕ ತಮ್ಮೆಲ್ಲರ ಅಭಿಪ್ರಾಯವನ್ನು ಪಡೆದು ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಖಂಡಿತವಾಗಿಯೂ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ಆಶ್ವಾಸನೆ ಕೊಡುತ್ತೇನೆ.

Delay in handing over possession of land to S.C. and S.T. people in Jajur Village.

340· SRI T. CHOWDAIAH (Bharamasagar) and SRI V. MASIYAPPA (Chitradurga).—Will the Minister for Revenue and Agriculture be pleased to state —

(a) whether Government is aware that more than one hundred families of S.C. and S.T. people are facing hardships in Jajur Village, Challakere Taluk, Chitradurga District due to inordinate delay in handing ov r possession of land granted to them 20 years ago in Amrithmahal Kaval of this village ;

(b) whether Government intend to take immediate action in the matter to see that possession of land is given to them ;

(c) if not the reason for inordinate delay in the matter ?

SRI S. BANGARAPPA (Minister for Revenue and Agriculture).—

(a) Yes,

(b) Yes.

(c) Delay is partly due to the fact that these lands had to be jointly inspected by the Survey and Revenue Officers of Andhra Pradesh for verification of State boundaries and demarcation of forest boundary abutting this land. Besides, these lands have come under unauthorised occupation, calling for eviction.

ಶ್ರೀ ಟಿ. ಚೌಡಯ್ಯ.-ಮಾನ್ಯ ಅಧ್ಯಕ್ಷರೇ, ನಾನು ಉಪ ಪ್ರಶ್ನೆ ಕೇಳುವುದಕ್ಕೆ ಮುಂಚೆ ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಕೆಲವು ವಿವರಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ, ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲ್ಲೂಕಿನ, ಜಜೂರು ಗ್ರಾಮದಲ್ಲಿ ೧೯೦ ಜನರಿಗೆ ತಲಾ ೫ ಎಕರೆ ಜಮೀನು ಮಂಜೂರು ಮಾಡ ಲಾಗಿತ್ತು ಮಂಜೂರು ಮಾಡಿದ ತಕ್ಷಣ ಹಲವಾರು ಪ್ರಭಾವಯುತ ವ್ಯಕ್ತಿಗಳು ಪಕ್ಕದಲ್ಲಿರತಕ್ಕ ಫಾರೆಸ್ಟ್‌ಗೆ ಈ ಜಮೀನನ್ನು ಸೇರಿಸಬೇಕು. ಇವರಿಗೆ ದಕ್ಕಿಸಬಾರದು ಎಂದು ಸ್ಟೇ ಆರ್ಡರ್ ತಂದರು. ನಾಲ್ಕೈದು ವರ್ಷಗಳಾದ ಮೇಲೆ ಫಾರೆಸ್ಟ್ ಇಲಾಖೆಯವರು ಮತ್ತು ರೆವಿನ್ಯೂ ಇಲಾಖೆಯವರು ಜಾಯಿಂಟ್ ಇನ್ಸ್‌ಪೆಕ್ಷ್ ಮಾಡಿ ೧೯೬೦ರ ಸರಿ ಸುಮಾರಿನಲ್ಲಿ ಡಿಮಾರ್ಕೇಷನ್ ಮಾಡಿ ಮುಗಿಸಿದರು. ಆದಾದ ಮೇಲೆ

ಅನೇಕ ಸಂದರ್ಭದಲ್ಲಿ ಸರ್ಕಾರಕ್ಕೆ ಮಾನವಿಗಳನ್ನು ಸಲ್ಲಿಸಲಾಯಿತು ಆದರೆ ಅವುಗಳ ಬಗ್ಗೆ ಸರ್ಕಾರ ಗಮನಿಸಲಿಲ್ಲ. ನಾನು ಶಾಸಕನಾಗಿ ಎರಡು ವರ್ಷಗಳ ಹಿಂದೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಪ್ರಶ್ನೆಯನ್ನು ಕಳಿಸಿದ ಮೇಲೆ ಸರ್ಕಾರದ ಈ ವಿಷಯದಲ್ಲಿ ಡಿಲೇ ಆಗಿರುವುದಕ್ಕೆ ಈರೀತಿ ಕಾರಣಗಳನ್ನು ಕೊಟ್ಟಿದೆ. "Delay is partly due to the fact that these lands had to be jointly inspected by the Survey and Revenue Officers of Andhra Pradesh for verification of State boundaries and demarcation of forest boundary abutting this land. Besides, these lands have come under unauthorised occupation, calling for eviction". ಆದರೆ ೨೦ ವರ್ಷಗಳ ಕಾಲ ಡಿಲೇಯಾಗಿರುವುದಕ್ಕೆ ಏನು ಕಾರಣ ಎನ್ನುವುದಕ್ಕೆ ಉತ್ತರ, ಬಂದಿಲ್ಲ ಫಾರೆಸ್ಟ್‌ನವರು ಬೌಂಡರೀಸ್ ಫಿಕ್ಸ್ ಮಾಡಲಿಕ್ಕೆ ಅನ್‌ಆಥರೈಸ್ಡ್ ಕಲ್ಟಿವೇಷನ್ನು ವೆಕೇಟ್ ಮಾಡಲಿಕ್ಕೆ, ೨೦ ವರ್ಷಗಳು ಬೇಕಾಯಿತೆ ?

ಶ್ರೀ ಎಸ್ ಬಂಗಾರಪ್ಪ.–ಮಾನ್ಯ ಅಧ್ಯಕ್ಷರೇ, ಇದನ್ನು ಒಂದು ಎಪಿಸೋಡ್ ಎಂದು ತರಿಯಬೇಕು ೨೦ ವರ್ಷಗಳ ಹಿಂದೆ ಹರಿಜನ–ಗಿರಿಜನರಿಗೆ ಜಮೀನು ಮಂಜೂರು ಮಾಡಿ ಸಾಗುವಳಿ ಚೀಟಿ ಕೊಟ್ಟು ಆಗಿದೆ. ಆದರೆ ಸ್ವಾಧೀನ ಕೊಡತಕ್ಕ ಸಂದರ್ಭದಲ್ಲಿ ಪ್ರಭಾವಯುತ ಜನರು ಮಾಡಿರತಕ್ಕ ಕೆಲಸವಿದು. ೫ ಸಾವಿರ ಚಿಲ್ಲರೆ ಒಕರೆ ಇರತಕ್ಕ ಈ ಅಮೃತಮಹಲ್ ಕಾವಲ್‌ನಲ್ಲಿ ೧೯೫೩–೫೪ರಲ್ಲಿ ೫೦೦ ಎಕರೆ ಮಂಜೂರು ಮಾಡಿದೆ, ಸಾಗುವಳಿ ಚೀಟಿ ಕೊಟ್ಟಿದೆ. ಉಳಿದಿರತಕ್ಕ ಭೂಮಿಯಲ್ಲಿ ಫಾರೆಸ್ಟ್ ಬೆಳೆಸುವುದಕ್ಕೆ ಕೊಡಬೇಕು ಎಂದು ಮಾಡಿದ್ದಾರೆ. ಭೂಮಿ ಕೊಟ್ಟು, ಸಾಗುವಳಿ ಚೀಟಿ ಕೊಟ್ಟ್ವದ ಮೇಲೆ ಸ್ವಾಧೀನ ಕೊಡತಕ್ಕ ಕಾಲದಲ್ಲಿ ಆ ಜಮೀನು ಫಾರೆಸ್ಟ್‌ಗೆ ಕೊಡಬೇಕು ಎಂದು ಹೇಳಿದ್ದಾರೆ, ಸ್ಟೇ ಆರ್ಡರ್ ತಂದಿದ್ದಾರೆ. ಸ್ಟೇ ಆರ್ಡರ್ ಬಂದ ಮೇಲೆ ಅದನ್ನು ವೆಕೇಟ್ ಮಾಡತಕ್ಕ ಪ್ರಯತ್ನ ಇವತ್ತಿಗೂ ಕೂಡ ನಡೆದಿಲ್ಲ. ಅದಕ್ಕೋಸ್ಕರ These persons in whose name this grant was made, could be given possession in favour of them, ಹಾಗೇ ಬಿಟ್ಟಿದ್ದಾರೆ. ಈ ಮಧ್ಯೆ ಆಂಧ್ರಪ್ರದೇಶ ಮತ್ತು ಕರ್ನಾಟಕದ ಬೌಂಡರಿ ಡಿಮಾರ್ಕೇಷನ್ ಪ್ರಶ್ನೆ ಉದ್ಭವವಾಯಿತು. ಅವರು ನಮ್ಮ ಭೂಮಿಯ ಮೇಲೆ ಬಂದಿದ್ದಾರೆಂದು ಹೇಳಲಾಗಿತ್ತು. ಅದಕ್ಕೆ ಸರ್ವೆ ಮಾಡಿಸಬೇಕಾಗಿತ್ತು. ಆದ್ದರಿಂದ ಆಂಧ್ರಪ್ರದೇಶದವರು ಮತ್ತು ಕರ್ನಾಟಕದವರು ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಿದ್ದಾರೆ. Now there is no trouble at all. Now, the report of the Special D.C. is to the effect that no space belonging to our State is encroached upon by the people of Andhra Pradesh. Our boundaries are intact and there is no trouble at all. ಆದುದರಿಂದ ಆ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಈಗ ಉಳಿದಿರುವುದು ಸ್ಟೇ ವೆಕೇಟ್ ಮಾಡಿ ಸ್ವಾಧೀನ ಕೊಡಿಸುವುದು ಏತನ್ಮಧ್ಯೆ ಅಕ್ಕಪಕ್ಕದ ತ್ಯಾಮಗೊಂಡ್ಲು, ರೆಡ್ಡಿಪಾಳ್ಯ, ಕಾಮಸಮುದ್ರ ತಿಪ್ಪಾರೆಡ್ಡಿಹಳ್ಳಿಯವರು ಆನ್ ಆಥರೈಸ್ಡ್ ಆಕ್ಯುಪೇಷನ್ ಮಾಡಿದ್ದಾರೆ. On 9th Octeber 1978 Special D. C. has gone th re. ಆದರ ಬಗ್ಗೆ ಸರ್ವೆ ಮಾಡಿದ ಮೇಲೆ ಅದು ಆನ್ ಆಥರೈಸ್ಡ್ ಆಕ್ಯುಪೇಷನ್ ಎಂದು ಗೊತ್ತಾಯಿತು. ಆದುದರಿಂದ, ಈಗ ಸ್ಟೇ ಆರ್ಡರ್ ವೆಕೇಟ್ ಮಾಡುತ್ತಾರೆ, on unanthorised lands, *bonafide* agriculturists must be from Karnataka State only. Under the land grant rules they cannot be given lands. ರೂಲ್ಸ್ ಪ್ರಕಾರ ಎಲಿಜಬಲಿಟಿ ಬರತಕ್ಕವರಿಗೆ ಸ್ಟೇ ಆರ್ಡರ್ ವೆಕೇಟ್ ಮಾಡಿ ಕೊಡುತ್ತಾರೆ.

ಶ್ರೀ ಟಿ. ಚೌಡಯ್ಯ.—ಅವರಿಗೆ ಜಮೀನು ಸ್ವಾಧೀನ ಕೊಡಲಿಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಕಾಲವನ್ನು ತಕ್ಷಣ ಹೇಳಲಾರೆ. ಬಹಳ ಶೀಘ್ರವಾಗಿ ಅಂದರೆ, within a month or two ಎಂದು ಇಟ್ಟುಕೊಳ್ಳಬಹುದು. ಅಧ್ಯಕ್ಷರೇ, ಇದರ ಬಗ್ಗೆ ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಬಹಳ ದೊಡ್ಡದು ಆಗುತ್ತದೆ. ಅನಕ್ಕೆ ಅವರು ಪ್ರತ್ಯೇಕವಾದ ರೂಲ್ ಕೆಳಗೆ ಪ್ರಶ್ನೆ ಕೇಳಲಿ. ಆಗ ಬೇಕಾದರೆ ನಾನು ಉತ್ತರವನ್ನು ಒದಗಿಸಿ ಕೊಡುವುದಕ್ಕೆ ಸಿದ್ಧನಿದ್ದೇನೆ.

ಅಧ್ಯಕ್ಷರು —ಮಾನ್ಯ ಸದಸ್ಯರು ಬೇರೆ ಒಂದು ನೋಟೀಸ್ ಕೊಟ್ಟರೆ, ಇದರ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.